

# ಗಾಂಧಿನಗರ ಪೋಸ್ಟ್

■ ರಘು

## ಸುರೇಶರ ಪುಟ್ಟಕ್ಕ

ಈಚಿನ ದಿನಗಳಲ್ಲಿ ಸದಭಿರುಚಿಯ ಚಿತ್ರಗಳ ನಿರ್ಮಾಣದಲ್ಲಿ ತೊಡಗಿಕೊಂಡು, ನಿರ್ದೇಶನದಿಂದ ದೂರವಿದ್ದ ಸುರೇಶ್ ಮತ್ತೆ ನಿರ್ದೇಶಕನ ಕ್ಯಾಪ್ ತೊಟ್ಟಿದ್ದಾರೆ. ಅವರ ನಿರ್ದೇಶನದ ಹೊಸ ಚಿತ್ರ 'ಪುಟ್ಟಕ್ಕನ ಹೈವೇ' ಸೆಟ್ಟೇರಿದೆ. 'ನಾನೂ ನನ್ನ ಕನಸು' ನಿರ್ಮಿಸಿದ್ದ ಡ್ಯುಯೆಟ್ ಮೂವೀಸ್ ಹಾಗೂ ಮೀಡಿಯಾ ಹೌಸ್ ಈ ಚಿತ್ರವನ್ನು ನಿರ್ಮಿಸುತ್ತಿವೆ.

ಪ್ರಗತಿಯ ಹೆಸರಿನಲ್ಲಿ ಗ್ರಾಮೀಣ ಬದುಕುಗಳ ಮೇಲೆ ಹೆದ್ದಾರಿಗಳು ಹರಿಯುತ್ತಿರುವ ದಿನಗಳಿವು. ರಸ್ತೆಯ ಹೆಸರಿನಲ್ಲಿ ರಾಜಕೀಯವೂ, ಮೇಜವಾನಿಗಳೂ ನಡೆಯುತ್ತಿರುವ ಸಂದರ್ಭವಿದು. ಈ ರಸ್ತೆ ರಾಜಕೀಯವನ್ನು ತಮ್ಮ ಚಿತ್ರದಲ್ಲಿ ಮೂಡಿಸುವುದು ಸುರೇಶರ ಹಂಬಲ. ಪುಟ್ಟಕ್ಕ ಎನ್ನುವ ನಮ್ಮ ನಡುವೆ ಇರಬಹುದಾದ ಬಡ ಹೆಣ್ಣುಮಗಳ ಖಾಸಗಿ ಬದುಕಿನಲ್ಲಿ ಹೆದ್ದಾರಿ ಎನ್ನುವ 'ಉಳ್ಳವರ ದಾರಿ' ಉಂಟುಮಾಡುವ ತವಕತಲ್ಲಣಗಳನ್ನು– ನಾಗತಿಹಳ್ಳಿ ಚಂದ್ರಶೇಖರ್ ಅವರ ಸಣ್ಣ ಕಥೆಯೊಂದನ್ನು– ಸುರೇಶ್ ಚಿತ್ರಕಥೆಯಾಗಿ ಹೊಸೆದಿದ್ದಾರೆ.

ಪುಟ್ಟಕ್ಕನಾಗಿ ಶ್ರುತಿ ನಟಿಸುತ್ತಿದ್ದಾರೆ. 'ಅವ್ವ' ಚಿತ್ರದ ನಂತರ ಮತ್ತೊಂದು ಪ್ರಯೋಗಶೀಲ ಪಾತ್ರದಲ್ಲಿ ಅಭಿನಯಿಸುವ ಅವಕಾಶ ಅವರದಾಗಿದೆ. ಮತ್ತೊಂದು ಮುಖ್ಯ ಪಾತ್ರದಲ್ಲಿ ಪ್ರಕಾಶ್ ರೈ ಅಭಿನಯಿಸುತ್ತಿದ್ದಾರೆ. ಅಚ್ಯುತಕುಮಾರ್, ವೀಣಾ ಸುಂದರ್, ಮಂಡ್ಯ ರಮೇಶ್, ಸಿಹಿಕಹಿ ಚಂದ್ರು ಮುಂತಾದವರು ತಾರಾಗಣದಲ್ಲಿದ್ದಾರೆ.



## ಗುಬ್ಬಿ ಗೂಡಿನಲ್ಲಿ ಕಣ್ಣಾಮುಚ್ಚಾಲೆ



ರಮ್ಯಾ ಮತ್ತೆ ಸುದ್ದಿಯಲ್ಲಿದ್ದಾರೆ. ಅವರೊಂದಿಗೆ ಐಂದ್ರಿತಾ ಕೂಡ!

ಈ ಮೊದಲು ಸಂಭಾವನೆಯ ಕಾರಣದಿಂದಾಗಿ ಪ್ರಕಾಶ್ ರೈ ನಿರ್ದೇಶನದ 'ನಾನೂ ನನ್ನ ಕನಸು' ಚಿತ್ರವನ್ನು ರಮ್ಯಾ ನಿರಾಕರಿಸಿದ್ದರು. ಆನಂತರ ಆ ಪಾತ್ರದಲ್ಲಿ ಅಮೂಲ್ಯ ನಟಿಸಿದ್ದರು. ಅಂಥದ್ದೇ ಪ್ರಕರಣ ಈಗ ಮರುಕಳಿಸಿದೆ. ಜಯಣ್ಣ ನಿರ್ಮಾಪಕರಾಗಿರುವ ಪ್ರೀತಂ ಗುಬ್ಬಿ ನಿರ್ದೇಶನದ ಚಿತ್ರದ ಪಾತ್ರಕ್ಕೆ ಸಂಭಾವನೆಯ ಕಾರಣದಿಂದಲೇ ರಮ್ಯಾ ಒಲ್ಲೆ ಎಂದಿದ್ದಾರೆ. 'ಈಯಮ್ಮನ ಸಹವಾಸವೇ ಬೇಡ' ಎಂದಿರುವ ನಿರ್ಮಾಪಕರು, ರಮ್ಯಾ ಮಾಡಬೇಕಿದ್ದ ಪಾತ್ರವನ್ನು ಐಂದ್ರಿತಾಗೆ ಆಫರ್ ಮಾಡಿದ್ದಾರೆ. ಆಕೆ ಹಸಿರುನಿಶಾನೆ ತೋರಿಸಿದ್ದಾರೆ.

ಗುಬ್ಬಿ ಚಿತ್ರದಲ್ಲಿ ಐಂದ್ರಿತಾಗೆ ನಾಯಕ ವಿಜಯ್. 'ಜಂಗ್ಲಿ' ಚಿತ್ರದಲ್ಲಿ ಈ ಜೋಡಿ ಸಖತ್ ಹಾಟ್ ಆಗಿ ಕಾಣಿಸಿಕೊಂಡಿತ್ತು. ಈ ಜೋಡಿಯ ಅದೇ ಮೋಡಿ ಮತ್ತೆ ಮರುಕಳಿಸೀತೆ?

## ರಾಧಿಕಾ ಹೊಸ ಮೂಡು!

ರಾಧಿಕಾ ಪಂಡಿತ್ ಸತತ ಎರಡು ಫಿಲ್ಮ್‌ಫೇರ್ ಪ್ರಶಸ್ತಿಗಳನ್ನು ಪಡೆದ ಪ್ರತಿಭಾವಂತ ನಟಿ. ಈ ಅಚ್ಚ ಕನ್ನಡತಿ ಅಭಿನಯದ 'ಗಾನಬಜಾನ' ಕಳೆದ ವಾರ ತೆರೆಕಂಡಿದೆ. ಸಿನಿಮಾ ಬಗ್ಗೆ ಭಿನ್ನ ಅಭಿಪ್ರಾಯಗಳಿದ್ದರೂ, ರಾಧಿಕಾ ಅಭಿನಯದ ಬಗ್ಗೆ ಎಲ್ಲರದೂ ಮೆಚ್ಚುಗೆಯ ಮಾತು. ಒರಟಾಗಿ ಬದುಕುವುದನ್ನು ಪ್ರೀತಿಸುವ ಹಾಗೂ ಒರಟು ಮಾತು– ಒರಟು ನೋಟದ ಹುಡುಗಿಯಾಗಿ ರಾಧಿಕಾ ತಮ್ಮ ಪಾತ್ರಕ್ಕೆ ಜೀವತುಂಬಿದ್ದಾರೆ.

'ಗಾನಬಜಾನ' ಬೆನ್ನಿಗೆ ಪುನೀತ್ ನಾಯಕರಾಗಿ ನಟಿಸುತ್ತಿರುವ ಹೊಸ ಚಿತ್ರದಲ್ಲೂ (ತಮಿಳಿನ 'ನಾಡೋಡಿಗಳ್' ಕನ್ನಡರೂಪ) ರಾಧಿಕಾಗೆ ನಾಯಕಿ ಪಾತ್ರ ದೊರೆತಿದೆ. ದೇಸಿ ಸೊಗಡಿನ ಈ ಚಿತ್ರದಲ್ಲೂ ರಾಧಿಕಾಗೆ ಅಭಿನಯಕ್ಕೆ ಅವಕಾಶವುಳ್ಳ ಪಾತ್ರ ದೊರೆತಿದೆ. ನಟಿಯೊಬ್ಬಳು ಬೆಳೆಯಬೇಕಾದದ್ದು ಹೀಗಲ್ಲವೇ?

